

# ಸೋದರಿ ನಿವೇದಿತಾ

## (ನಾಟಕ)


ರಚನೆ

ಪಾಂಡುರಂಗ ಜೋಯಿಸ್ ಕೆ.ಎನ್.

ಸರಗೂರು ರಮೇಶ್


## ಭಾಗ ೩

### ದೃಶ್ಯ -೧೦

**(ಪ್ಲೇಗು; ಕಸಗುಡಿಸುವುದು ; ಹಸಿದವರಿಗೆ ಊಟ – ತೊಡೆಯ ಮೇಲೆ)**

**ನಿವೇದಿತಾ :** ಹೇ ಭಾರತವೇ! ನೀನೆಷ್ಟು ಕರುಣಾಮಯಿ! ನಿನ್ನ ರಕ್ತದ ಕಣಕಣವೂ ಇತರರ ಮೇಲಿನ ಕರುಣೆಯಿಂದ ಮಿಡಿಯುತ್ತಿದೆ. ನಾನೆಷ್ಟು ಜನ್ಮವೆತ್ತಿದರೂ ನನ್ನ ಬಾಳನ್ನು ಭರತ ವರ್ಷದ ಸೇವೆಗೆ ಸಮರ್ಪಿಸುತ್ತೇನೆ. ನನ್ನ ಗುರುದೇವನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹಗಲಿರುಳೂ ಶ್ರಮಿಸುತ್ತೇನೆ.

**(ಸ್ವಾಮೀಜಿಯವರ ದೇಹತ್ಯಾಗ ; ನಿವೇದಿತಾ ಕಣ್ಣಿಗೆ ಬಟ್ಟೆ)**

***ವಾಣಿ:*** *೧೯೦೨ ಜುಲೈ ೪ರಂದು ಸ್ವಾಮೀಜಿಯವರು ದೇಹತ್ಯಾಗ ಮಾಡಿದರು. ಏನಾಶ್ಚರ್ಯ! ಆ ಚಿತಾಗ್ನಿಯಿಂದ ಸ್ವಾಮೀಜಿಯವರ ವಸ್ತ್ರವೊಂದು ಹಾರಿ ಬಂದು ಅವಳ ಪಾದದ ಹತ್ತಿರ ಬಿದ್ದಿತು. ಸ್ವಾಮಿ ವಿವೇಕಾನಂದರು ಶಾಶ್ವತವಾಗಿ ಸೋದರಿ ನಿವೇದಿತಾಳೊಡನೆ ಇರುವರು ಎಂದು ಸೂಚಿಸುವ ಈ ಅದ್ಭುತ ಘಟನೆ ಆಗ ಸಂಭವಿಸಿತು.*

### ದೃಶ್ಯ -೧೧

**(ನಿವೇದಿತಾ – ಸ್ವಾಮೀಜಿಯ ವಸ್ತ್ರದೊಂದಿಗೆ)**

**ನಿವೇದಿತಾ:** ನನ್ನ ಗುರುದೇವ ದೇಹತ್ಯಾಗ ಮಾಡಿ ನಮ್ಮಿಂದ ಅಗಲಿದರು. ಇದು ನನ್ನ ಜೀವನದ ಅತ್ಯಂತ ಕರಾಳ ದಿನ. ತಾಯಿಯನ್ನು ಕಳೆದುಕೊಂಡ ಅನಾಥ ಮಗುವಿನಂತೆ ದುಃಖಿಸುತ್ತಾ ಅವರ ಚಿತೆಯನ್ನೇ ನೋಡುತ್ತಿದ್ದೆ. ಅವರು ಹೊದ್ದುಕೊಳ್ಳುತ್ತಿದ್ದ ಉತ್ತರೀಯ ಚಿತೆಯಿಂದ ಗಾಳಿಯಲ್ಲಿ ಹಾರಿ, ನನ್ನ ಕಡೆಗೆ ಬಂದು ಬಿದ್ದಿತು. ನಿನ್ನ ಬಾಳಿನುದ್ದಕ್ಕೂ ನಾನು ನಿನ್ನೊಂದಿಗಿರುವೆ ಎಂದು ಅವರು ಮಾತು ಕೊಟ್ಟಿದ್ದರು. ನನ್ನ ಗುರುದೇವ ನನ್ನ ಕೈ ಬಿಡಲಿಲ್ಲ. ಈ ರೂಪದಲ್ಲಿ ಇಂದಿಗೂ ನನ್ನೊಂದಿಗಿದ್ದಾರೆ ನನ್ನ ಗುರುದೇವ. (ಉತ್ತರೀಯವನ್ನು ಕಣ್ಣಿಗೊತ್ತಿಕೊಳ್ಳುವಳು)

***ವಾಣಿ:*** *(ರಾಜಕೀಯ ಪ್ರವೇಶ) ಗುರುವಿನ ವಿಯೋಗದ ನಂತರ ನಿವೇದಿತಾ ಗುರುವಿನ ಆದರ್ಶವನ್ನು ಪೂರ್ಣಗೊಳಿಸಬೇಕು – ಅವರು ನೆಟ್ಟ ಸಸಿಗೆ ನೀರೆರೆದು ಬೆಳಸಬೇಕು ಎಂದು ಭಾವಿಸಿದಳು. ಇದಕ್ಕೆ ರಾಜಕೀಯ ಸ್ವಾತಂತ್ರ್ಯ ಆವಶ್ಯಕ ಎಂಬುವುದು ಅವಳ ನಿಲುವಾಗಿತ್ತು. ರಾಷ್ಟ್ರನಿರ್ಮಾಣವೇ ನನ್ನ ಗುರಿ ಎಂದು ಅವಳು ಹೇಳುತ್ತಿದ್ದಳು. ಭಾರತಕ್ಕೆ ರಾಷ್ಟ್ರಪ್ರಜ್ಞೆಯು ಜಾಗ್ರತವಾಗಿ ದೇಶವು ಸ್ವತಂತ್ರವಾಗಬೇಕು ಎಂಬುದು ಅವಳ ಭಾವನೆ. ಇದಕ್ಕೆ ತನ್ನ ತನು, ಮನವನ್ನು ಅರ್ಪಿಸಿದಳು. ಭಾಷಣ, ಲೇಖನಗಳ ಮೂಲಕ ರಾಷ್ಟ್ರೀಯತೆಯನ್ನು ಎಚ್ಚರಿಸಲು ಶ್ರಮವಹಿಸಿದಳು. ಯುವಕರಲ್ಲಿ ರಾಷ್ಟ್ರ ಪ್ರಜ್ಞೆಯನ್ನು ಬಿತ್ತಿದಳು.*

### ದೃಶ್ಯ -೧೨

**(ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ – ಭಾರತಮಾತೆಯ ಭಕ್ತಳಾಗಿ ಸ್ವದೇಶಿ ಚಳುವಳಿ ಅವಳ ಅಸ್ತ್ರವಾಯಿತು)**

**ನಿವೇದಿತಾ :** ಈಗ ದಾಸ್ಯದಲ್ಲಿ ಬಿದ್ದು ನರಳುತ್ತಿರುವ ನಮ್ಮ ಭಾರತ ದೇಶದ ಏಕೈಕ ಕರ್ತವ್ಯವೆಂದರೆ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು. ಮುಂದಿನ ೫೦ ವರ್ಷಗಳವರೆಗೆ, ಉಳಿದ ದೇವರುಗಳನ್ನು ಕುರಿತು ಚಿಂತಿಸುವುದನ್ನು ನಿಲ್ಲಿಸಿ. ಭರತವರ್ಷವೇ ನಮ್ಮ ದೇವರಾಗಲಿ. ನೀವು ಮದ್ರಾಸಿ, ಗುಜರಾತಿ, ಬಂಗಾಳಿ... ಯಾರೇ ಆಗಿರಲಿ. ನಮ್ಮೆಲ್ಲರ ಗುರಿ ಒಂದೇ. ನಮ್ಮ ಇಂದಿನ ಕಾರ್ಯ ಸಾಧನೆ ಒಂದೇ. ಎಲ್ಲರೂ ಒಂದಾಗಿ. ನಿಮ್ಮ ಸರ್ವಶಕ್ತಿಗಳನ್ನೂ ಈ ಮಹತ್ತರ ಸಾಧನೆಗೆ ಅರ್ಪಿಸಿ. ಸ್ವತಂತ್ರ ಭಾರತದ ಕಲ್ಪನೆಯನ್ನು ನಿಮ್ಮ ಹೃನ್ಮನಗಳಲ್ಲಿ ಸ್ಥಾಪಿಸಿ ಒಂದಾಗಿ ದುಡಿಯಿರಿ.

### ದೃಶ್ಯ -೧೩

**(ಸಹೋದರಿಯರ ಮನೆ)**

***ವಾಣಿ:*** *ನಿವೇದಿತಾ ವಾಸಿಸುತ್ತಿದ್ದ ಮನೆ* ***'ಭಗಿನಿಯರ ನಿವಾಸ'*** *ವೆಂದು ಕಲ್ಕತ್ತೆಯಲ್ಲಿ ಪ್ರಸಿದ್ಧವಾಗಿತ್ತು. ಇಲ್ಲಿ ನಿವೇದಿತಾ ಸೋದರಿ ಕ್ರಿಸ್ಟೀನ್ ಜೊತೆಗೆ ವಾಸವಾಗಿದ್ದರು. ಅನೇಕ ಜನ ಪ್ರಖ್ಯಾತ ವ್ಯಕ್ತಿಗಳು ಅವಳನ್ನು ಕಾಣಲು ಅಲ್ಲಿಗೆ ಬರುತ್ತಿದ್ದರು. ಶ್ರೀಮಾತೆ, ಸಂನ್ಯಾಸೀ ಭಕ್ತರು ಮತ್ತು ಗೃಹಸ್ಥ ಭಕ್ತರು ಅಲ್ಲಿಗೆ ಬರುತ್ತಿದ್ದರು. ಕವಿಗಳು, ಚಿತ್ರಕಾರರು, ವಿಜ್ಞಾನಿಗಳಿಗೆ ಅದು ಬಿಡಾರವಾಗಿತ್ತು. ಅವರಲ್ಲಿ ಪ್ರಮುಖರೆಂದರೆ ಅರವಿಂದ ಘೋಷ್, ಸುಭಾಷ್ ಚಂದ್ರ ಬೋಸ್, ಬಿಪಿನ್ ಚಂದ್ರ ಪಾಲ್, ನಂದ ಲಾಲ್ ಬೋಸ್. ಆಕೆಯ ಪರಮ ಆಪ್ತ ಸ್ನೇಹಿತರು ವಿಶ್ವವಿಖ್ಯಾತ ವಿಜ್ಞಾನಿಯಾದ ಜಗದೀಶ ಚಂದ್ರ ಬೋಸ್ ಮತ್ತು ಅವರ ಪತ್ನಿ ಅಬಲಾ ಬೋಸ್. ಗುರುದೇವ ರವೀಂದ್ರನಾಥ್ ಠಾಕೂರರು ನಿವೇದಿತಾಳನ್ನು* ***'ಲೋಕಮಾತಾ'*** *ಎಂದು ಕರೆದು ಗೌರವಿಸುತ್ತಿದ್ದರು.*

**ವಾಣಿ:** *(ಸ್ವಾಮೀಜಿ ಪ್ರತ್ಯಕ್ಷರಾಗುವರು) ಬಿಡುವಿಲ್ಲದ ಕೆಲಸಗಳಿಂದ ಸೋದರಿ ನಿವೇದಿತಾಳ ಆರೋಗ್ಯ ಶಿಥಿಲವಾಗತೊಡಗಿತು. ನಿವೇದಿತಾ ಬೋಸ್ ದಂಪತಿಗಳೊಡನೆ ಡಾರ್ಜಿಲಿಂಗಿಗೆ ಹೋದಳು. ಒಂದು ದಿನ ಡಾರ್ಜಿಲಿಂಗ್‌ನಲ್ಲಿ......*

### ದೃಶ್ಯ -೧೪

**(ಬಳಲಿದ ನಿವೇದಿತಾ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ – ಸ್ವಾಮೀಜಿ ಕಾಣಿಸಿಕೊಳ್ಳುವರು)**

**ಸ್ವಾಮೀಜಿ:** ಮಗು ನಿವೇದಿತಾ! ಎಷ್ಟೊಂದು ದಣಿದಿರುವೆ ಕಂದಾ! ನಿನ್ನ ದೇಹದ ಕಣ ಕಣದಲ್ಲಿರುವ ಶಕ್ತಿಯನ್ನು ಭಾರತಕ್ಕಾಗಿ ಬಸಿದುಬಿಟ್ಟಿರುವೆ. ವಿದೇಶಿ ವಸ್ತ್ರ ಧರಿಸಿರುವ ಸಾಕ್ಷಾತ್ ಸರಸ್ವತಿಯ ಒಂದು ರೂಪವೇ ನೀನು ಎನಿಸಿತ್ತು ನನಗೆ, ನಿನ್ನನ್ನು ಮೊದಲು ಕಂಡಾಗ! ನಾನು ಆಗಬೇಕೆಂದುಕೊಂಡ ಅನೇಕ ಕೆಲಸಗಳನ್ನು ಶ್ರದ್ಧಾಭಕ್ತಿಗಳಿಂದ ನೆರವೇರಿಸಿರುವೆ. ಬಾ ನಿವೇದಿತಾ....! ಬಂದು ಬಿಡು. ಶ್ರೀ ರಾಮಕೃಷ್ಣರ ಸನ್ನಿಧಿಯಲ್ಲಿ ವಿಶ್ರಾಂತಿ ಪಡೆಯುವೆಯಂತೆ. ಬಾ ಮಗು – ನಿವೇದಿತಾ...! ನಿನ್ನ ಜೀವನವು ದೇವರಿಗೆ ಅರ್ಪಿತವಾಗಿ ಸಾರ್ಥಕವಾಗಿದೆ! ಬಂದುಬಿಡು ನಿವೇದಿತಾ.....! ಬಂದು ಬಿಡು... (ಮಾಯವಾಗುವರು)



**ವಾಣಿ:** *೧೯೧೧ ಅಕ್ಟೋಬರ್ ೧೩ ರ ಬೆಳಿಗ್ಗೆ ೭ ಘಂಟೆ.. ಹಿಮಾಲಯದ ಸೂರ್ಯನನ್ನು ನೋಡುತ್ತಾ ಡಾರ್ಜಿಲಿಂಗ್‌ನಲ್ಲಿ* ***'ಅಸತ್ಯದಿಂದ ಸತ್ಯಕ್ಕೆ, ಅಜ್ಞಾನದಿಂದ ಜ್ಞಾನಕ್ಕೆ, ಮೃತ್ಯುವಿನಿಂದ ಅಮೃತತ್ವಕ್ಕೆ ನನ್ನನ್ನು ಕರೆದುಕೊಂಡು ಹೋಗು'*** *ಎನ್ನುವ ಪ್ರಾರ್ಥನೆಯೊಂದಿಗೆ ನಿವೇದಿತಾ ತನ್ನ ಕೊನೆಯುಸಿರನ್ನೆಳೆದಳು. ಹಿಂದೂ ಪದ್ಧತಿಯಂತೆ ಅಂತ್ಯಸಂಸ್ಕಾರವನ್ನು ಮಾಡಿದರು. ನಿವೇದಿತಾ ಈ ಪ್ರಪಂಚದ ತೆರೆಯ ಹಿಂದೆ ಇರುವ ಅವ್ಯಕ್ತ ಪ್ರಪಂಚಕ್ಕೆ ಸಂತಸದಿಂದ ಹಾರಿದಳು.*

*ನಿವೇದಿತಾ ಎಂಬ ಜೀವಹನಿ ಪರಬ್ರಹ್ಮ ಸಾಗರದಲ್ಲಿ ಸಂಗಮವಾಯಿತು. ಭಾರತಕ್ಕಾಗಿ ತನ್ನ ಜೀವನವನ್ನೇ ಮುಡಿಪಿಟ್ಟು ತ್ಯಾಗಮೂರ್ತಿಯಾದಳು ಈಕೆ. ಭಾರತ ತನ್ನದು, ಭಾರತೀಯರು ತನ್ನವರೆಂದು ನಿವೇದಿತಾ ಭಾವಿಸಿದಳು. ಅವಳ ಸಂಸ್ಕಾರ ನಡೆದ ಜಾಗದಲ್ಲಿ ಅವಳ ಸ್ಮಾರಕವಾಗಿ ಸಾರ್ವಜನಿಕರು ಒಂದು ದೇವಸ್ಥಾನವನ್ನು ನಿರ್ಮಿಸಿದರು.*

***'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'*** *ಎಂಬ ಸ್ವಾಮೀಜಿಯವರ ಧ್ಯೇಯಕ್ಕೆ ನಿದರ್ಶನವಾದಳು ನಿವೇದಿತಾ. ವಿದೇಶದಿಂದ ನಮ್ಮ ದೇಶಕ್ಕೆ ಆಗಮಿಸಿ, ತನ್ನ ಜೀವನ ಸಮಸ್ತವನ್ನೂ ಸಮರ್ಪಿಸಿಕೊಂಡ ಸೋದರಿ ನಿವೇದಿತಾಗೆ ನಮ್ಮೆಲ್ಲರ ಗೌರವ ಸಲ್ಲಬೇಕು. ನಾವೂ ಸಹ ಅವಳಂತೆಯೇ ಮನುಕುಲದ ಏಳಿಗೆ ಮತ್ತು ದೇಶದ ಪ್ರಗತಿಗಾಗಿ ಅರ್ಪಣ ಭಾವದಿಂದ ದುಡಿಯೋಣ.*

***(ಮುಗಿಯಿತು)***

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ:** ಚಿತ್ರದಲ್ಲಿ ಶ್ರೀರಾಮಕೃಷ್ಣರು ನಿಜವಾಗಿಯೂ ಇದ್ದಾರೇನು?

**ಶ್ರೀಮಾತೆ:** ಇಲ್ಲವೇ ಮತ್ತೆ? ನೆರಳು ಮತ್ತು ದೇಹ ಎರಡೂ ಒಂದೇ. ಭಾವಚಿತ್ರ ಅವರ ನೆರಳೇ ಆಗಿದೆ.

**ಶಿಷ್ಯ:** ಎಲ್ಲ ಚಿತ್ರಗಳಲ್ಲೂ ಅವರಿದ್ದಾರೆಯೆ?

**ಶ್ರೀಮಾತೆ:** ಹೌದು, ಅವರನ್ನು ನಿರಂತರ ಪ್ರಾರ್ಥಿಸುತ್ತ ಹೋದರೆ ಅವರು ಚಿತ್ರದ ಮೂಲಕ ಆವಿರ್ಭವಿಸುವರು. ಅವರ ಚಿತ್ರವನ್ನಿಟ್ಟ ಸ್ಥಳವೇ ದೇವರಕೋಣೆಯಾಗುವುದು. ಉದಾಹರಣೆಗೆ ಆ ಜಾಗದಲ್ಲಿ ('ಉದ್ಬೋಧನ'ದ ಉತ್ತರ ದಿಕ್ಕಿಗಿದ್ದ ಬಯಲನ್ನು ತೋರಿಸುತ್ತ) ಯಾರಾದರೂ ಅವರನ್ನು ಪೂಜಿಸಿದರೆ, ಅದು ಅವರ ಪುಣ್ಯಸ್ಥಳವಾಗುವುದು.

**ಶಿಷ್ಯ:** ಅಂದರೆ ಆ ಸ್ಥಳದಲ್ಲಿ ಪುಣ್ಯಸ್ಮೃತಿಗಳ ಸಂಸರ್ಗವುಂಟಾಗುವುದು ಎಂದು ಅನ್ನಿಸುತ್ತದೆ.

**ಶ್ರೀಮಾತೆ:** ಹಾಗೇನಲ್ಲ, ಆ ಸ್ಥಳದಲ್ಲಿ ಅವರ ವಿಶೇಷ ದೃಷ್ಟಿ ಬೀಳುವುದು.

**ಶಿಷ್ಯ:** ಸರಿ, ಶ್ರೀರಾಮಕೃಷ್ಣರಿಗೆ ಅರ್ಪಿಸುವ ನೈವೇದ್ಯವನ್ನೆಲ್ಲ ಅವರು ನಿಜವಾಗಿಯೂ ತಿನ್ನುತ್ತಾರೇನು?

**ಶ್ರೀಮಾತೆ:** ಹೌದು, ತಿನ್ನುತ್ತಾರೆ.

**ಶಿಷ್ಯ:** ಎಲ್ಲಿ, ಅವರು ತಿಂದ ಗುರುತು ಕಾಣಿಸುವುದಿಲ್ಲವಲ್ಲ?

**ಶ್ರೀಮಾತೆ:** ಅವರ ಕಣ್ಣಿನಿಂದ ಒಂದು ಬೆಳಕು ಹೊರಬಂದು ನೈವೇದ್ಯವನ್ನೆಲ್ಲ ಸ್ಪರ್ಶಿಸುವುದು. ಅವರ ಅಮೃತಸ್ಪರ್ಶದಿಂದ ಅದು ಮತ್ತೆ ಪರಿಪೂರ್ಣವಾಗುವುದು. ಆದ್ದರಿಂದ ಅದು ಕಡಿಮೆಯಾಗದು.

**'ಶ್ರೀಶಾರದಾದೇವಿ ವಚನವೇದ'** ದಿಂದ *(ಪು.೧೬೫)*